## ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 197/2025**

ಆರೋಪಿಯ ಹೆಸರುಃ ಶ್ರೀ ಬಶೀರಾ
ತಂದೆ ಹೆಸರುಃ ಫೈರೊಜ ಶೇಖ
ವಯಸ್ಸುಃ 47 ವರ್ಷ
ಉದ್ಯೋಗಃ ಬಟ್ಟೆ ವ್ಯಾಪಾರ
ವಿಳಾಸಃ ಸಾಃ # 206, ಪಳ್ಳಿಕೇರಿ, ಬೊಬ್ರುವಾಡ, ತಾಃ ಅಂಕೋಲಾ

**ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ**

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?
ಉತ್ತರಃ

ಪ್ರ 2ಃ ಪಿಡಬ್ಲ್ಯೂ 1- ರಾಮಮೂರ್ತಿ ಪ್ರಮೋದ ನಾಯಕ, ಸಾಲ ವಸೂಲಾತಿ ಅಧಿಕಾರಿ, ಫಿರ್ಯಾದಿ ಸುಪ್ರಭಾತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಶಾಖೆಃ ಅಂಕೋಲಾ, ಇವರು ತಮ್ಮ ಸಾಕ್ಷಿಯಲ್ಲಿ ಆರೋಪಿ ದಿಃ 12-01-2022 ರಂದು ಫಿರ್ಯಾದಿ ಸಂಸ್ಥೆಯಿಂದ ವ್ಯವಹಾರದ ಸಲುವಾಗಿ ರೂ.1,15,000/- ಸಾಲವನ್ನು ಬಟ್ಟೆ ವ್ಯಾಪಾರದ ಸಲುವಾಗಿ ಪಡೆದಿದ್ದು ಇರುತ್ತದೆ. ಆರೋಪಿ ಮತ್ತು ಜಾಮಿನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಅಸಲು ಮತ್ತು ಬಡ್ಡಿ ಸೇರಿ ರೂ. 84,700/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿ ದಿನಾಂಕಃ 29-10-2024 ರಂದು ತಾನು ಕೆನರಾ ಬ್ಯಾಂಕ್ , ಶಾಖೆಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 346429 ನ್ನು ರೂ. 84,700/- ಕ್ಕೆ ನೀಡಿರುತ್ತಾನೆ. ಸದರಿ ಆರೋಪಿ ನೀಡಿದ ಚೆಕ್ಕು

"**Funds Insufficient**" ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 20/08/2025

**( ಅರ್ಪಿತಾ ಬಿ. ಬೆಲ್ಲದ)**

**ಹೆ. ಪ್ರ ದ ನ್ಯಾದಂ, ಅಂಕೋಲಾ.**